1	2006–07	ರಾಜ್ಯವಲಯ	124.34	143.05	4.22	269.30
		ಜಿಲ್ಲಾ ವಲಯ	69.48	78.17	2.16	153.98
		ಒಟ್ಟು	**193.82**	**221.22**	**6.38**	**423.28**
2	2007–08	ರಾಜ್ಯವಲಯ	119.373	171.418	17.413	292.964
		ಜಿಲ್ಲಾ ವಲಯ	51.35	72.07	7.96	131.74
		ಒಟ್ಟು	**170.723**	**243.488**	**25.373**	**424.704**
3	2008–09	ರಾಜ್ಯವಲಯ	114.70	159.85	8.14	282.69
		ಜಿಲ್ಲಾ ವಲಯ	54.39	77.66	8.13	140.39
		ಒಟ್ಟು	**169.09**	**237.51**	**16.48**	**423.08**

394

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)

ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

ಅ) ಬೀದರ್ ಜಿಲ್ಲೆಯಲ್ಲಿರುವ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಸುಮಾರು 33 ವರ್ಷದ ಹಳೆಯ ಕಾರ್ಖಾನೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ) ಹಾಗಿದ್ದಲ್ಲಿ ಕೇಂದ್ರ ಸರ್ಕಾರವು ನಷ್ಟದಲ್ಲಿರುವ ಮತ್ತು ಹಳೆಯ ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ಯೋಜನೆಗಳನ್ನು ರೂಪಿಸಿರುವುದು ನಿಜವೆ?

ಹೌದು, ನಿಜವಿರುತ್ತದೆ.

ಇ) ಹಾಗಿದ್ದಲ್ಲಿ ರಾಜ್ಯ ಸರ್ಕಾರವು ಈ ದಿಶೆಯಲ್ಲಿ ರೋಗಗ್ರಸ್ಥವಾಗಿರುವ ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ಯಾವ ಯೋಜನೆಗಳನ್ನು ರೂಪಿಸಿದೆ?

1) ರಾಜ್ಯ ಸರ್ಕಾರವು ಆರ್ಥಿಕ ಸಂಕಷ್ಟದಲ್ಲಿರುವ, ಸ್ಥಗಿತಗೊಂಡಿರುವ ಮತ್ತು ನಿರ್ಮಾಣ ಹಂತದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು

ಖಾಸಗಿಯವರಿಗೆ ದೀರ್ಘಾವಧಿಯ ಮೇಲೆ ಗುತ್ತಿಗೆ ನೀಡಿ, ಈ ಮೂಲಕ ಆ ಭಾಗದ ಕಬ್ಬು ಬೆಳೆಗಾರರ ಕಲ್ಯಾಣ ಮಾಡುವುದರ ಮೂಲಕ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸುತ್ತಿದೆ.

2) ಸಹಕಾರಿ ಸಕ್ಕರೆ ಕಾರ್ಖಾನೆಗಳು ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯಲು ಸರ್ಕಾರವು ಖಾತರಿ ನೀಡಿರುತ್ತದೆ.

ಈ) ಈ ಯೋಜನೆ ವಿವರಗಳೇನು?

1) ರಾಜ್ಯ ಸರ್ಕಾರವು ಆರ್ಥಿಕ ಸಂಕಷ್ಟದಲ್ಲಿರುವ, ಸ್ಥಗಿತಗೊಂಡಿರುವ 7 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಮತ್ತು ನಿರ್ಮಾಣ ಹಂತದಲ್ಲಿರುವ 3 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ದೀರ್ಘಾವಧಿಯ ಮೇಲೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಕ್ಕೆ ಕ್ರಮ ಕೈಗೊಂಡಿರುತ್ತದೆ.

2) ರಾಜ್ಯ ಸರ್ಕಾರವು 2004–2005ನೇ ಸಾಲಿನಿಂದ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ದುಡಿಯುವ ಬಂಡವಾಳ ಸಾಲ ಪಡೆಯಲು ಖಾತರಿ ನೀಡಿರುತ್ತದೆ.

ಉ) ಈ ಯೋಜನೆಯಡಿಯಲ್ಲಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಸಧ್ಯದಲ್ಲಿ ಯಾವುದೇ ಕಾರ್ಯ ಯೋಜನೆ ಇರುವುದಿಲ್ಲ.

ಊ) ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಹೊಂದಿರುವ ಸಾಲವನ್ನು ಷೇರು ಬಂಡವಾಳವನ್ನಾಗಿ ಪರಿವರ್ತಿಸುವಂತೆ ಕೋರಿ ಸದರಿ ಸಕ್ಕರೆ ಕಾರ್ಖಾನೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೆ?

ಕಾರ್ಖಾನೆಯು ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಆಧುನೀಕರಣಕ್ಕಾಗಿ ಪಡೆದಿರುವ SDF ಸಾಲವನ್ನು ಷೇರು ಬಂಡವಾಳವನ್ನಾಗಿ ಪರಿವರ್ತಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿದೆ.

ಋ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕಾರ್ಖಾನೆ ಸಾಲ ಪಡೆದಿರುವುದರಿಂದ ಈ ಸಾಲವನ್ನು ಷೇರು ಬಂಡವಾಳವನ್ನಾಗಿ ಪರಿವರ್ತಿಸಲು ಬರುವುದಿಲ್ಲ.

ಸಂಖ್ಯೆ: ವಾಕೈ 16 ಸಸಕಾ 2009

(ಶಿವರಾಜ್ ಎಸ್. ತಂಗಡಗಿ)
ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು